O.S.36/2017.

PW : 1

ದಿನಾಂಕ 17-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎನ್ ಡಿ ವಕೀಲರಿಂದ, 4 ರಿಂದ 6 ನೇ ಪ್ರತಿವಾದಿ ಪರಃ

ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆಯ ವಿಚಾರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಚಾರ ಗೊತ್ತು. ಸರ್ವೆ ನಂ.2 ರ ಒಟ್ಟು ವಿಸ್ತೀರ್ಣ 9 ಎಕರೆಗಿಂತ ಹೆಚ್ಚಿದೆ. ಸರ್ವೆ ನಂ.2 ರ ಜಮೀನು ಮೂಲತಃ ನನ್ನ ತಾತನಿಗೆ ಸೇರಿದ್ದು. ಸರ್ವೆ ನಂ.2 ರ ಜಮೀನು ಮೂಲತಃ ಉತ್ತಾರಾಧಿಮಠದ ಮಾಲ್ಕಿ ಜಮೀನು ಎಂದರೆ ಸರಿ. 1947-48 ರಲ್ಲಿ ನಮ್ಮ ತಂದೆ ಸರ್ವೆ ನಂ.2 ರ ಜಮೀನಿನಲ್ಲಿ ವಾರಸುದಾರರ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದರು. ಸರ್ವೆ ನಂ.2 ರ ಜಮೀನಿನ ಪೈಕಿ 2 ಎಕರೆ 12 ಗುಂಟೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತ್ತಿದ್ದರು. ಸದರಿ ವಿಸ್ತೀರ್ಣದ ಪೂರ್ವಕ್ಕೆ ತಿರಕಣ್ಣ ಹಾಗೂ ಉಪಾರ ರಾಮಣ್ಣನ ಜಮೀನು, ಪಶ್ಚಿಮಕ್ಕೆ ತುಮ್ಮಿನಕಟ್ಟಿ ರಸ್ತೆ, ಉತ್ತರಕ್ಕೆ ಭೀಮಣ್ಣ ಪಾಟೀಲ, ದಕ್ಷಿಣಕ್ಕೆ ಸುರೇಶ ಪಾಟೀಲ ರವರ ಜಮೀನು ಇದೆ. ಸಾಕ್ಷಿ ಸ್ವತಃ ಉತ್ತರಕ್ಕೆ ಸುರೇಶ ಪಾಟೀಲ, ದಕ್ಷಿಣಕ್ಕೆ ಬೀಮಣ್ಣ ಪಾಟೀಲ ರವರ ಜಮೀನು ಇದೆ ಎನ್ನುತ್ತಾರೆ. 1999 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಭೂನ್ಯಾಯ ಮಂಡಳಿಗೆ ಸದರಿ ವಿಸ್ತೀರ್ಣವನ್ನು ಮಂಜೂರು ಮಾಡುವಂತೆ ಅರ್ಜಿ ಕೊಟ್ಟಿದ್ದಾರೆ. ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿ ಆದೇಶ ಆಗಿದೆ. ಸದರಿ ಆದೇಶವನ್ನು ನ್ಯಾ•ಯಾಲಯಕ್ಕೆ ಸಲ್ಲಿಸಿಲ್ಲ. 1947-48 ರಿಂದ ಈ ದಿನದವರೆಗೂ ದಾವಾಸ್ತಿಯಲ್ಲಿ ಸಾಗುವಳಿ ಮಾಡುತ್ತಿರುವುದನ್ನು ತೋರಿಸಲು ದಾಖಲೆ ಸಲ್ಲಿಸಿದ್ದೇನೆ. ನಿಪಿ-1 ರಲ್ಲಿ 1947-48 ನೇ ಸಾಲಿನಲ್ಲಿ ಮಾತ್ರ ನಿಮ್ಮ ತಂದೆಯ ಹೆಸರನ್ನು ನಮೂದಿಸಿದ್ದಾರೆ, ಮುಂದಿನ ವರ್ಷಗಳಲ್ಲಿ ನಿಮ್ಮ ತಂದೆಯ ಹೆಸರನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ಸೂಕ್ತ ಉತ್ತರ ನೀಡಿಲ್ಲ. ನಿಮ್ಮ ತಂದೆ 1 ವರ್ಷಕ್ಕೆ ಕಂದಾಯ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು, ಅವರು ದಾವಾಸ್ತಿಯಲ್ಲಿ ಸಗುವಳಿ ಮಾಡುತ್ತಿರಲಿಲ್ಲದ ಕಾರಣ ಕಂದಾಯದ ದಾಖಲೆಗಳಲ್ಲಿ ಅವರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನೀವು ದಾವಾಸ್ತಿಯ ಸ್ವಾಧೀನದಾರರಲ್ಲ, ಪ್ರತಿವಾದಿಗಳೇ ದಾವಾಸ್ತಿಯ ಸ್ವಾಧೀನದಾರರು ಎಂದರೆ ಸರಿಯಲ್ಲ. 4 ರಿಂದ 6 ನೇ ಪ್ರತಿವಾದಿಗಳ ತಂದೆ ಭೂನ್ಯಾಯ ಮಂಡಳಿಗೆ ಗೇಣಿದಾರರ ಆಧಾರದ ಮೇಲೆ ಅನುಭೋಗದಾರಿಕೆಯ ಹಕ್ಕನ್ನು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು, ದಾವಾ ಸ್ವತ್ತನ್ನು ಅವರ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸಾಕ್ಷಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ದಾವಾ ಸಲ್ಲಿಸುವಾಗ ಪ್ರತಿವಾದಿಗಳ ವಿರುದ್ದ ಏಕಪಕ್ಷಿಯವಾಗಿ •ಯಾವುದೇ ಮಧ್ಯಂತರ ಆದೇಶ ಪಡೆಯಲು ಅರ್ಜಿಯನ್ನು ಸಲ್ಲಿಸಿಲ್ಲ. ನೀವು ದಾವಾಸ್ತಿಯ ಸ್ವಾಧೀನದಲ್ಲಿ ಇಲ್ಲದ ಕಾರಣ •ಯಾವುದೇ ಮಧ್ಯಂತರ ಆದೇಶ ಪಡೆದಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿ ಕುಷ್ಕಿ ಜಮೀನು. ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಕುಷ್ಕಿ ಜಮೀನಿನಲ್ಲಿ ಮೆಕ್ಕೆ ಜೋಳ ಬಿತ್ತನೆ ಕೆಲಸ ಮಾಡುತ್ತಾರೆ. ಅದು 4 ತಿಂಗಳ ಬೆಳೆ ಎಂದರೆ ಸರಿ. ಸುಳ್ಳು ಕಾರಣ ರೂಪಿಸಿ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂ.2 ರಲ್ಲಿನ ಜಮೀನುಗಳ ಪೋಡ ಆಗಿದೆ ಎಂದರೆ ಸರಿ. ಇಂದಿಗೂ ನೀವು ದಾವಾಸ್ತಿಯ ಸ್ವಾಧೀನದಾರರಲ್ಲ ಎಂದರೆ ಸರಿಯಲ್ಲ. ನೀವು ದಾವಾಸ್ತಿಗೆ ವಿರುದ್ದ ಕಬ್ಜಾ ನಾತೆಯಿಂದ ಮಾಲೀಕರಲ್ಲ, ದಾವೆಯ ಪರಿಹಾರಕ್ಕೆ ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.